RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ-IVA | ಬೆಂಗಳೂರು, ಗುರುವಾರ, ಜೂನ್ ೨೭, ೨೦೧೯ (ಆಷಾಢ ೬, ಶಕ ವರ್ಷ ೧೯೪೦) | ನಂ. ೫೧೯ |
|---|---|---|
| Part-IVA | Bengaluru, Thursday, June 27, 2019 (Ashada 6, Shaka Varsha 1940) | No. 519 |


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂ. ಗ್ರಾಅಪ:427:ಗ್ರಾಪಂಕಾ:2017, ಬೆಂಗಳೂರು, ದಿನಾಂಕ: 21.06.2019

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಕಲಂ 3ರ ಉಪ ಕಲಂ (1) ಸಹವಾಚನ ಕಲಂ 8ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಧಿನಿಯಮದ ಕಲಂ 3ರ ಅಡಿಯ ಉಪಕಲಂ (2) ಖಂಡ (ಎ) ರಲ್ಲಿ ಅಗತ್ಯಪಡಿಸಲಾಗಿರುವಂತೆ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ) (ವಿಶೇಷ) ನಿಯಮಗಳು, 2019 ರ ಕರಡನ್ನು ಈ ಮೂಲಕ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಈ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಿಂದ ಮೇಲೆ ತಿಳಿಸಿದ ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಅಥವಾ ಸಲಹೆ ರಾಜ್ಯ ಸರ್ಕಾರದಲ್ಲಿ ಸ್ವೀಕೃತಗೊಂಡಲ್ಲಿ ಅಂತಹವುಗಳನ್ನು ರಾಜ್ಯ ಸರ್ಕಾರದಿಂದ ಪರಿಗಣಿಸಲಾಗುತ್ತದೆ. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇ ಮಹಡಿ, 3ನೇ ದ್ವಾರ, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು – 560001 ಇವರಿಗೆ ವಿಳಾಸಿಸಬಹುದಾಗಿದೆ.

ಕರಡು ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ನೇಮಕಾತಿ) (ವಿಶೇಷ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006 ಅಥವಾ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008 ಅಥವಾ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) ಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14) ರಡಿ ಮಾಡಿರುವ ಅಥವಾ ಮಾಡಲಾಗಿದೆಯೆಂದು ಭಾವಿಸಬಹುದಾದ ಇತರೆ ಯಾವುದೇ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ

ದರ್ಜೆ ಲೆಕ್ಕ ಸಹಾಯಕರ ನೇಮಕಾತಿ) (ವಿಶೇಷ) ನಿಯಮಗಳು 2019 ರ ಅನುಸಾರ ಈ ನಿಯಮಗಳು ಪ್ರಾರಂಭವಾಗುವ ದಿನಾಂಕದಂದು ಲಭ್ಯವಿರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ನೇರ ನೇಮಕಾತಿ ಕೋಟಾದ (ಹೈದರಾವಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಒಳಗೊಂಡಂತೆ) ಖಾಲಿ ಹುದ್ದೆಗಳಿಗೆ ನೇಮಕಾತಿಗೆ ಅನ್ವಯಿಸತಕ್ಕದ್ದು.

ಪರಂತು, ಈ ನಿಯಮಗಳಲ್ಲಿ ಯಾವುದೂ ಒಂದು ಬಾರಿಗಿಂತ ಹೆಚ್ಚಿನ ನೇಮಕಾತಿಗೆ ಅನ್ವಯಿಸತಕ್ಕದ್ದಲ್ಲ.

2. ಪರಿಭಾಷೆಗಳು:- (1) ಈ ನಿಯಮಗಳಲ್ಲಿ ಸಂದರ್ಭಾನುಸಾರ ಅಗತ್ಯವೆನಿಸಿದ ಹೊರತು:-

(i) **"ನೇಮಕಾತಿ ಪ್ರಾಧಿಕಾರ"** ಎಂದರೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಅಭಿವೃದ್ಧಿ).

(ii) **"ಪರೀಕ್ಷಾ ಪ್ರಾಧಿಕಾರ"** ಎಂದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ನೇರ ನೇಮಕಾತಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ವಹಿಸುವ ಯಾವುದೇ ಪ್ರಾಧಿಕಾರ.

(iii)**"ಅರ್ಹತಾ ಪರೀಕ್ಷೆ"** ಎಂದರೆ ನೇಮಕಾತಿಗಾಗಿ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ ನಿಗಧಿಪಡಿಸಿದ ಕನಿಷ್ಠ ವಿದ್ಯಾರ್ಹತೆ.

(iv) **"ಷೆಡ್ಯೂಲ್"** ಎಂದರೆ ಈ ನಿಯಮಗಳಿಗೆ ಅನುಬಂಧಿಸಿದ ಷೆಡ್ಯೂಲ್.

(v) **"ವಿಶೇಷ ಆಯ್ಕೆ ಸಮಿತಿ"** ಎಂದರೆ ನಿಯಮ 3 ರ ಅಡಿ ರಚಿಸಿರುವ ವಿಶೇಷ ಆಯ್ಕೆ ಸಮಿತಿ : ಮತ್ತು

(vi) **"ರಾಜ್ಯ ಸರ್ಕಾರ"** ಎಂದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಇತರೆ ಪದಗಳು ಮತ್ತು ಅಭಿವ್ಯಕ್ತಿಗಳು ಅವುಗಳಿಗೆ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**3. ವಿಶೇಷ ಆಯ್ಕೆ ಸಮಿತಿಯ ರಚನೆ:-** ಈ ನಿಯಮಗಳ ಅಡಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ರಾಜ್ಯ ಮಟ್ಟದಲ್ಲಿ ಈ ಕೆಳಕಂಡ ಸದಸ್ಯರನ್ನು ಹೊಂದಿರುವ ಒಂದು ವಿಶೇಷ ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು.

| | | |
|---|---|---|
| I. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | ಅಧ್ಯಕ್ಷರು |
| II. | ಆಯುಕ್ತರು/ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಅಥವಾ ಜಂಟಿ ನಿರ್ದೇಶಕರ ಹುದ್ದೆಗೆ ಕಡಿಮೆ ಇಲ್ಲದ ಅವರ ನಾಮನಿರ್ದೇಶಿತರು. | ಸದಸ್ಯರು |
| iii | ಆಯುಕ್ತರು/ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥವಾ ಜಂಟಿ ನಿರ್ದೇಶಕರ ಹುದ್ದೆಗೆ ಕಡಿಮೆ ಇಲ್ಲದ ಅವರ ನಾಮನಿರ್ದೇಶಿತರು. | ಸದಸ್ಯರು |
| Iv | ವಿಶೇಷ/ಅಪರ/ಜಂಟಿ ಕಾರ್ಯದರ್ಶಿ (ಸೇವಾ ನಿಯಮಗಳು) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | ಸದಸ್ಯರು |
| V | ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಅಥವಾ ಜಂಟಿ ನಿರ್ದೇಶಕರ ಹುದ್ದೆಗೆ ಕಡಿಮೆ ಇಲ್ಲದ ಅವರ ನಾಮನಿರ್ದೇಶಿತರು. | ಸದಸ್ಯರು |
| vi | ನಿರ್ದೇಶಕರು, ಗಿರಿಜನ ಕಲ್ಯಾಣ ಇಲಾಖೆ ಅಥವಾ ಅಥವಾ ಜಂಟಿ ನಿರ್ದೇಶಕರ ಹುದ್ದೆಗೆ ಕಡಿಮೆ ಇಲ್ಲದ ಅವರ ನಾಮನಿರ್ದೇಶಿತರು | ಸದಸ್ಯರು |
| vii | ನಿರ್ದೇಶಕರು, (ಪಂಚಾಯತ್ ರಾಜ್-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | ಸದಸ್ಯ ಕಾರ್ಯದರ್ಶಿ |

4. ವಯೋಮಿತಿ :- ಈ ನಿಯಮಗಳಡಿ ಖಾಲಿ ಹುದ್ದೆಗಳ ನೇರ ನೇಮಕಾತಿಗೆ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1997 ರ ಅನುಸಾರ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಕ್ರಮವಾಗಿ 18 ವರ್ಷಗಳು ಮತ್ತು 40 ವರ್ಷಗಳು ಇರತಕ್ಕದ್ದು.

5. **ನೇಮಕಾತಿಗಾಗಿ ಅರ್ಜಿಗಳು:-** (1) ವಿಶೇಷ ಆಯ್ಕೆ ಸಮಿತಿಯು ಸಂಬಂಧಪಟ್ಟ ಪ್ರತಿಯೊಂದು ಜಿಲ್ಲಾ ಪಂಚಾಯತಿಯಿಂದ ಪ್ರತಿ ಜಿಲ್ಲೆಯಲ್ಲಿ ಭರ್ತಿ ಮಾಡಬೇಕಾದ ಹುದ್ದೆಗಳ ವರ್ಗ ಮತ್ತು ಖಾಲಿ ಹುದ್ದೆಗಳ ಸಂಖ್ಯೆ ಇವುಗಳ ಬಗ್ಗೆ ಮಾಹಿತಿ ಪಡೆದು, ವಿದ್ಯಾರ್ಹತೆ, ವಯಸ್ಸು, ಆಯ್ಕೆ ಸ್ವರೂಪ, ಚಾಲ್ತಿಯಲ್ಲಿರುವ ಯಾವುದೇ ಕಾನೂನು ಅಥವಾ ಅದೇಶಾನುಸಾರ ಕಲ್ಪಿಸಿರುವ ಮೀಸಲಾತಿಯನ್ವಯ ಹುದ್ದೆಗಳ ವರ್ಗೀಕರಣ ನಿರ್ದಿಷ್ಟಪಡಿಸಿ ಆನ್‌ಲೈನ್ ಮುಖಾಂತರ ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ಅಂತಹ ಪ್ರಕಟಣೆಯ ಉದ್ಧೃತ ಭಾಗವನ್ನು ಕರ್ನಾಟಕ ರಾಜ್ಯ ಪತ್ರ ಮತ್ತು ರಾಜ್ಯದಲ್ಲಿ ಹೆಚ್ಚು ಪ್ರಸಾರ ಹೊಂದಿರುವ ಕನಿಷ್ಠ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು ಹಾಗೂ ಆ ಪೈಕಿ ಒಂದು ಕನ್ನಡ ದಿನಪತ್ರಿಕೆಯಾಗಿರತಕ್ಕದ್ದು.

(2) ಯಾವುದೇ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಒಬ್ಬ ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಅವನ\ಳ ಆಯ್ಕೆಯ ಯಾವುದಾದರೂ ಒಂದು ಜಿಲ್ಲೆಯನ್ನು ನೇಮಕಾತಿಗಾಗಿ ನಮೂದಿಸತಕ್ಕದ್ದು ಮತ್ತು ಆಯ್ಕೆಯು ಆ ಜಿಲ್ಲೆಗೆ ಮಾತ್ರ ಸೀಮಿತಗೊಂಡಿರತಕ್ಕದ್ದು. ಅಭ್ಯರ್ಥಿಯು ತನ್ನನ್ನು ಯಾವ ಹುದ್ದೆಗೆ ಪರಿಗಣಿಸಬೇಕು ಎಂಬ ಬಗ್ಗೆ ಆದ್ಯತೆಯನ್ನು ನಮೂದಿಸತಕ್ಕದ್ದು.

6. **ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುವುದು:-** (1) ವಿಶೇಷ ಆಯ್ಕೆ ಸಮಿತಿಯು ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈ ಕೆಳಕಂಡಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸತಕ್ಕದ್ದು, ಅದೇನೆಂದರೆ:-

(ಎ) ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳಿಗೋಸ್ಕರ ವಸ್ತುನಿಷ್ಠ ಬಹು ಆಯ್ಕೆ ಮಾದರಿಯನ್ವಯ ತಲಾ 100 ಅಂಕಗಳನ್ನೊಳಗೊಂಡ ಎರಡು ಪ್ರಶ್ನೆ ಪತ್ರಿಕೆಗಳಿರುತ್ತವೆ.

(i) **ಪತ್ರಿಕೆ-I.- ಸಾಮಾನ್ಯ ಪತ್ರಿಕೆ:-** ನಿಗದಿಪಡಿಸಿದ ವಿದ್ಯಾರ್ಹತೆ ತೇರ್ಗಡೆ ಹೊಂದಿರುವ ವ್ಯಕ್ತಿಯಿಂದ ಅಪೇಕ್ಷಿಸಬಹುದಾದ ಹಾಲಿ ಘಟನಾವಳಿಗಳಿಗೆ ಸಂಬಂಧಿಸಿದ ಸಾಮಾನ್ಯ ಜ್ಞಾನ, ಸಾಮಾನ್ಯ ವಿಜ್ಞಾನ, ಭಾರತೀಯ ಇತಿಹಾಸ, ಭಾರತೀಯ ಭೂಗೋಳ ಶಾಸ್ತ್ರ, ಸಮಾಜ ವಿಜ್ಞಾನ, ದಿನನಿತ್ಯ ಗಮನಿಸುವ ಆಗು-ಹೋಗುಗಳ ವಿಚಾರ, ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲೀಷ್, ಸಾಮಾನ್ಯ ಮನೋಸಾಮರ್ಥ್ಯ ಮತ್ತು ಕಂಪ್ಯೂಟರ್ ಜ್ಞಾನ : ಮತ್ತು

(ii) **ಪತ್ರಿಕೆ-II ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬಗ್ಗೆ ನಿರ್ದಿಷ್ಟ ಪತ್ರಿಕೆ.-** ಕರ್ನಾಟಕ ಮತ್ತು ಭಾರತದ ಗ್ರಾಮಗಳ ಜನರ ಸ್ಥಿತಿ-ಗತಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಹಾಗೂ ನಿಯಮಗಳು, ಗ್ರಾಮೀಣಾಭಿವೃದ್ಧಿಯ ಕೇಂದ್ರ ಮತ್ತು ರಾಜ್ಯ ಕಾರ್ಯಕ್ರಮಗಳು, ಕುಡಿಯುವ ನೀರು ಮತ್ತು ನೈರ್ಮಲ್ಯ ಮತ್ತು ಪಂಚಾಯತ್ ರಾಜ್.

(ಬಿ) ಪ್ರಶ್ನೆ ಪತ್ರಿಕೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸತಕ್ಕದ್ದು.

(ಸಿ) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರೀಕ್ಷಾ ಪ್ರಾಧಿಕಾರವು ಪ್ರಕಟಿಸತಕ್ಕದ್ದು.

7. **ಕನ್ನಡ ಭಾಷಾ ಜ್ಞಾನ :-** (1) 150 ಅಂಕಗಳನ್ನೊಳಗೊಂಡ ಒಂದು ಕನ್ನಡ ಭಾಷಾ ಅರ್ಹತಾ ಪರೀಕ್ಷಾ ಪತ್ರಿಕೆಯಲ್ಲಿ ಕನಿಷ್ಠ 50 ಅಂಕಗಳನ್ನು ಪಡೆದು ಕನ್ನಡ ಭಾಷಾ ಜ್ಞಾನದ ಬಗ್ಗೆ ಅರ್ಹತೆಗಳಿಸದ ಯಾವುದೇ ಅಭ್ಯರ್ಥಿಯು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಂ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 ಮತ್ತು ದ್ವೀತಿಯ ದರ್ಜೆ ಲೆಕ್ಕ ಸಹಾಯಕ ಹುದ್ದೆಯ ಆಯ್ಕೆಪಟ್ಟಿಯಲ್ಲಿ ಸೇರಲು ಅರ್ಹನಾಗಿರತಕ್ಕದ್ದಲ್ಲ. ಈ ಪತ್ರಿಕೆ ಮಟ್ಟವು ಎಸ್.ಎಸ್.ಎಲ್.ಸಿ ಹಂತದ ಕನ್ನಡ ಪ್ರಥಮ ಭಾಷಾ ಮಟ್ಟದ್ದಾಗಿರತಕ್ಕದ್ದು.

ಪರಂತು, ಒಬ್ಬ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಪರೀಕ್ಷೆ ಅಥವಾ ಯಾವುದೇ ಸಮಾನಾಂತರ ಪರೀಕ್ಷೆ ಅಥವಾ ಎಸ್.ಎಸ್.ಎಲ್.ಸಿ ಗಿಂತ ಮೇಲ್ಪಟ್ಟದ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆಯನ್ನಾಗಿ ಅಥವಾ ಎರಡನೇ ಭಾಷೆಯನ್ನಾಗಿ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯಲ್ಲಿನ ಒಂದು ವಿಷಯವಲ್ಲ). ಅಥವಾ ಕನ್ನಡ ಮಾಧ್ಯಮದಲ್ಲಿ ತೇರ್ಗಡೆಹೊಂದಿರಬೇಕು ಅಥವಾ ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

(2) ಕನ್ನಡ ಭಾಷಾ ಪರೀಕ್ಷೆಯನ್ನು ವಿಶೇಷ ಆಯ್ಕೆ ಸಮಿತಿಯು ಪರೀಕ್ಷಾ ಪ್ರಾಧಿಕಾರದ ಮುಖಾಂತರ ನಡೆಸತಕ್ಕದ್ದು.

**8. ಅಭ್ಯರ್ಥಿಗಳ ಆಯ್ಕೆಪಟ್ಟಿ ತಯಾರಿಸುವುದು:-** (1) ವಿಶೇಷ ಆಯ್ಕೆ ಸಮಿತಿಯು ನಿಯಮ 5 ರಡಿಯಲ್ಲಿನ ಪ್ರಕಟಣೆಗಳನ್ನು ಅನುಸರಿಸಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪೈಕಿ ಪ್ರತಿ ವರ್ಗದ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅವರು ಗಳಿಸಿದ ಒಟ್ಟು ಶೇಕಡವಾರು ಅಂಕಗಳನ್ನು ಆಧರಿಸಿ ನಿರ್ಧರಿಸಿದ ಮೆರಿಟ್ ಅನುಸಾರ ಹಾಗೂ ಚಾಲ್ತಿಯಲ್ಲಿರುವ ಯಾವುದೇ ಕಾನೂನು ಅಥವಾ ಆದೇಶಾನುಸಾರ ಕಲ್ಪಿಸಿರುವ ಮೀಸಲಾತಿಗೆ ಒಳಪಟ್ಟು ಅಧಿಸೂಚಿಸಿರುವ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾಗಿ ನೇಮಕಾತಿಗೆ ಅರ್ಹರಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ ಪ್ರಕಟಿಸತಕ್ಕದ್ದು.

(2) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮನಾದ ಶೇಕಡಾವಾರು ಅಂಕಗಳನ್ನು ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅರ್ಹತೆಯನ್ನು ಅವರ ವಯಸ್ಸನ್ನಾಧರಿಸಿ, ವಯಸ್ಸಿನಲ್ಲಿ ಹಿರಿಯರಾದ ಅಭ್ಯರ್ಥಿಯನ್ನು ಅರ್ಹತಾ ಪಟ್ಟಿಯಲ್ಲಿ ಮೇಲಿನ ಕ್ರಮಾಂಕದಲ್ಲಿ ನಿಗದಿಮಾಡತಕ್ಕದ್ದು. ಅದರಂತೆ ವಿಶೇಷ ಆಯ್ಕೆ ಸಮಿತಿಯು ಪ್ರತಿಯೊಂದು ವರ್ಗದ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು.

(3) ವಿಶೇಷ ಆಯ್ಕೆ ಸಮಿತಿಯು ಉಪ ನಿಯಮ (1) ರಡಿಯಲ್ಲಿನ ಆಯ್ಕೆ ಪಟ್ಟಿಯಲ್ಲಿ ಸೇರಿಲ್ಲದ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಸಹ ಪ್ರತಿಯೊಂದು ಮೀಸಲಾತಿ ವರ್ಗದಲ್ಲಿ ಮೊದಲನೇ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ ಉಪ ನಿಯಮ (1) ರಡಿ ತಯಾರಿಸಿದ ಅಭ್ಯರ್ಥಿಗಳ ಶೇಕಡ 25% ರಷ್ಟಕ್ಕೆ ಸಮನಾಗಿ ತಯಾರಿಸತಕ್ಕದ್ದು.

(4) ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಆಯ್ಕೆ ಪಟ್ಟಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ 150 ದಿನಗಳ ಒಳಗಾಗಿ, ವಿಶೇಷ ಆಯ್ಕೆ ಸಮಿತಿಯು ತಯಾರಿಸುವುದು. ಉಪ ನಿಯಮ (1) ರಿಂದ (3) ರಡಿ ತಯಾರಿಸಿದ ತಾತ್ಕಾಲಿಕ ಪಟ್ಟಿ, ಅಂತಿಮ ಪಟ್ಟಿ ಹಾಗೂ ಹೆಚ್ಚುವರಿ ಪಟ್ಟಿಗಳನ್ನು ಅಧಿಕೃತ ರಾಜ್ಯಪತ್ರ ಮತ್ತು ವಿಶೇಷ ಆಯ್ಕೆ ಸಮಿತಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

(5) ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಆಯ್ಕೆ ಪಟ್ಟಿಗಳು ಈ ನಿಯಮಗಳಡಿ ನಿರ್ದಿಷ್ಟಪಡಿಸಿದ ಎಲ್ಲಾ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಈ ವೃಂದಗಳ ಮುಂದಿನ ಆಯ್ಕೆ ಪಟ್ಟಿಗಳು ಪ್ರಕಟವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾನ್ಯತೆ ಹೊಂದಿರತಕ್ಕದ್ದು.

**9. ಅಭ್ಯರ್ಥಿಗಳ ನೇಮಕಾತಿ:-** (1) ವಿಶೇಷ ಆಯ್ಕೆ ಸಮಿತಿಯು ನಿಯಮ (8) ರಡಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸಿಕೊಡತಕ್ಕದ್ದು. ವಿಶೇಷ ಆಯ್ಕೆ ಸಮಿತಿಯು ತಯಾರಿಸಿದ ಆಯ್ಕೆ ಪಟ್ಟಿಯಲ್ಲಿ ಒಳಗೊಂಡ ಅಭ್ಯರ್ಥಿಯು ನೇಮಕಾತಿ ಹೊಂದಲು ಸರ್ವರೀತಿಯಲ್ಲಿ ಅರ್ಹನಿದ್ದಾನೆಂದು ಅವಶ್ಯವೆನಿಸಿದ ವಿಚಾರಣೆ ನಡೆಸಿದ ನಂತರ ಮನವರಿಕೆ ಮಾಡಿಕೊಂಡು, ನೇಮಕಾತಿ ಪ್ರಾಧಿಕಾರವು ಮುಖ್ಯ ಆಯ್ಕೆ ಪಟ್ಟಿಯಲ್ಲಿರುವಂತೆ ಹೆಸರುಗಳ ಕ್ರಮಾಂಕವನ್ನು ಅನುಸರಿಸಿ ಖಾಲಿ ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡತಕ್ಕದ್ದು.

(2) ಆಯ್ಕೆ ಪಟ್ಟಿಯಲ್ಲಿ ಹೆಸರು ಸೇರಿರುವ ಅಭ್ಯರ್ಥಿಯು ನಿಗದಿತ ಅಥವಾ ವಿಸ್ತರಿತ ಅವಧಿಯ ಒಳಗೆ ಕರ್ತವ್ಯಕ್ಕೆ ಹಾಜರಾಗಲು ವಿಫಲನಾದಲ್ಲಿ, ಕರ್ತವ್ಯಕ್ಕೆ ಹಾಜರಾಗಲು ವಿಫಲನಾದ ಅಭ್ಯರ್ಥಿಯು ಯಾವ ವರ್ಗಕ್ಕೆ ಸೇರಿದ್ದನೋ ಅದೇ ವರ್ಗದ ಮೀಸಲಾತಿಗೆ ಸೇರಿದ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಯನ್ನು ನೇಮಕಾತಿ ಪ್ರಾಧಿಕಾರವು, ಅವಶ್ಯವೆನಿಸುವ ವಿಚಾರಣೆಯನ್ನು ನಡೆಸಿದ ನಂತರ, ಸದರಿ ಅಭ್ಯರ್ಥಿಯು ನೇಮಕಾತಿ ಹೊಂದಲು ಸರ್ವರೀತಿಯಲ್ಲಿ ಅರ್ಹರಿರುವುದು ಕಂಡು ಬಂದಲ್ಲಿ ನೇಮಕಾತಿ ಮಾಡಿಕೊಳ್ಳತಕ್ಕದ್ದು. ಮುಖ್ಯ ಆಯ್ಕೆ ಪಟ್ಟಿಯಲ್ಲಿ ಭರ್ತಿಯಾಗದಿರುವ ಹುದ್ದೆಗಳ ಸಂಖ್ಯೆಯನ್ನು ಮೀರದಂತೆ ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಬಹುದು.

(3) ನಿಯಮ 8 ರಂತೆ ಪ್ರಕಟಿಸಲಾದ ಮುಖ್ಯ ಅಯ್ಕೆ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರು ಸೇರ್ಪಡೆಯಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕು ಪ್ರದಾನವಾಗತಕ್ಕದ್ದಲ್ಲ.

**10. ಇತರೆ ನಿಯಮಗಳ ಅನ್ವಯಿಸುವಿಕೆ:-** ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ಹಾಗೂ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರಡಿ ಸರ್ಕಾರಿ ನೌಕರರ ನೇಮಕಾತಿ ನಿಯಂತ್ರಣ ಮತ್ತು ಸೇವಾ ನಿಬಂಧನೆಗಳ ಕುರಿತು ಮಾಡಿರುವ ಅಥವಾ ಮಾಡಿರುವರೆಂದು ಭಾವಿಸಬಹುದಾದ ಪ್ರಸ್ತುತ ಚಾಲ್ತಿಯಲ್ಲಿರುವ ಇತರೆ ಎಲ್ಲಾ ನಿಯಮಗಳು ಈ ನಿಯಮಗಳಲ್ಲಿನ ಉಪಬಂಧಗಳಿಗೆ ಅವು ಅಸಂಗತವಾಗದಿರುವಷ್ಟರ ಮಟ್ಟಿಗೆ ಈ ನಿಯಮಗಳ ಉಪಬಂಧಗಳು ಈ ನಿಯಮಗಳಡಿ ಮಾಡಲಾದ ನೇಮಕಾತಿಗೆ ಹಾಗೂ ನೇಮಕಾತಿ ಹೊಂದುವ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು.

ಷೆಡ್ಯೂಲ್

(ನಿಯಮ 1 ರ ಉಪನಿಯಮ (3) ಮತ್ತು ನಿಯಮ 2 ನ್ನು ನೋಡುವುದು.

| ಕ್ರಮ ಸಂಖ್ಯೆ | ಹುದ್ದೆಗಳ ವರ್ಗ ಮತ್ತು ವೇತನ ಶ್ರೇಣಿ | ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ. | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 1 | ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಮ್ ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-2 (21400-42,000) | ಉಳಿಕೆ ವೃಂದ = + ಹೈದರಾಬಾದ್ ಕರ್ನಾಟಕ ವೃಂದ = ಒಟ್ಟು | ನೇರ ನೇಮಕಾತಿ ಮುಖಾಂತರ | ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ತೇರ್ಗಡೆ ಹೊಂದಿರಬೇಕು. |
| 2 | ದ್ವಿತೀಯ ದರ್ಜೆ ಲೆಕ್ಕ ಸಹಾಯಕ (21400-42,000) | ಉಳಿಕೆ ವೃಂದ = + ಹೈದರಾಬಾದ್ ಕರ್ನಾಟಕ ವೃಂದ = ಒಟ್ಟು | ನೇರ ನೇಮಕಾತಿ ಮುಖಾಂತರ | ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ತೇರ್ಗಡೆ ಹೊಂದಿರಬೇಕು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಮುಬಾರಕ್ ಅಹ್ಮದ್
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**RURAL DEVELOPMENT & PANCHAYATH RAJ SECRETARIAT**

**NOTIFICATION**

**No. RDP 427 GPK 2017, Bengaluru, Dated: 21.06.2019**

The draft of the Karnataka General Service (Development Branch and Local Government Branch) (Recruitment of Grama Panchayath Secretary cum Rural Development Assistant grade-2 and Second Division Accounts Assistant) (Special) Rules, 2019, which the Government of Karnataka proposes to make in exercise of the powers conferred under sub-section (1) of section 3 read with section 8 of the Karnataka State Civil Services Act; 1978 (Karnataka Act No. 14 of 1990) is hereby published as required by clause (a) of sub-section (2) of section 3 of the said Act, for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Principal Secretary to Government (Panchayath Raj) Rural Development and Panchayath Raj Department, 3rd Floor, 3rd Gate, M.S. Buildings, Dr. B.R. Ambedkar Veedhi, Bangalore – 560001.

**DRAFT RULES**

1. **Title and commencement and application:-** (1) These rules may be called the Karnataka General Service (Development Branch and Local Government Branch) (Recruitment of Grama Panchayath Secretary cum Rural Development Assistant Grade-2 and Second Division Accounts Assistant) (Special) Rules, 2019.

(2) They shall come into force from the date of their publication in the official Gazette.

(3) Notwithstanding anything contained in the Karnataka Civil Services (General Recruitment) Rules, 1977 or the Karnataka Civil Services (Direct Recruitment by Competitive

Examinations and Selection) (General) Rules, 2006 or Karnataka General Service (Development Branch and Local Government Branch) (Cadre and Recruitment) Rules, 2008, or in any other rules of recruitment relating to the categories of posts of Grama Panchayath Secretary cum Rural Development Assistant Grade-2 and Second Division Accounts Assistant in the Karnataka General Service (Development Branch and Local Government Branch) made or deemed to have been made under the Karnataka State Civil Services Act 1978 (Karnataka Act 14 of 1990), the provisions of these rules, shall apply to fill the number of posts of Grama Panchayath Secretary cum Rural Development Assistant Grade-2 and Second Division Accounts Assistant in Direct Recruitment Quota (including the vacant posts in the Districts of Hyderabad-Karnataka Region) available on the date of commencement of these rule.

2. **Definitions:-** (1) In these rules, unless the context otherwise requires,-

(i) "Appointing Authority" means the Deputy Secretary (Development) of Zilla Panchayath of the respective District.

(ii) "Examination Authority" means Karnataka Examination Authority, or any other Authority to which the State Government may entrust to conduct competitive examination for the direct recruitment posts in the cadre of Grama Panchayath Secretary cum Rural Development Assistant Grade-2 and Second Division Accounts Assistant

(iii) "Qualifying examination" means the minimum qualification for recruitment to the posts specified in the Schedule.

(iv) "Schedule" means schedule appended to these rules;

(v) "Special Selection Committee" means Special Selection Committee constituted under rule 3; and

(vi) "State Government" means the Government of Karnataka in Rural Development and Panchayath Raj Department.

(2) Words and expressions used but not defined in these rules shall have the same meaning assigned to them in the Karnataka Civil Services (General Recruitment) Rules 1977.

**3. Constitution of Special Selection Committee:-** There shall be constituted a Special Selection Committee at the State level for recruitment to fill up the posts of Grama Panchayath Secretary cum Rural Development Assistant Grade-2 and Second Division Accounts Assistant under these rules consisting of the following members namely:-

| | | |
|---|---|---|
| (i) | The Principal Secretary to government (Panchayath Raj), Rural Development & Panchayath Raj Department. | Chairman |
| (ii) | The Commissioner/Director of Social Welfare or his nominee not below the rank of Joint Director | Member |
| (iii) | The Commissioner/Director of Backward Classes Welfare or his nominee not below the rank of Joint Director | Member |
| (iv) | The Special/Additional/Joint Secretary DPAR (Service Rules) | Member |
| (v) | The Director, Department for Empowerment of Differently Abled and Senior Citizens or his nominee not below the rank of Joint Director. | Member |
| (vi) | The Director, Department of Tribal Welfare or his nominee not below the rank of Join Director | Member |
| (vii) | Director, (Panchayath Raj-1,) Rural Development and Panchayath Raj Department. | Member – Secretary |

**4. Age Limit:-** The minimum and maximum age limit for direct recruitment to the vacancies under these rules shall be 18 years and 40 years respectively in accordance with the Karnataka Civil Services (General Recruitment) Rules, 1977.

**5. Applications for Recruitment:-** (1) The Special Selection Committee shall after obtaining information from the concerned Zilla Panchayath, regarding category of posts, and number of vacancies to be filled in each district, shall specify the qualification, age, nature of selection, classification of posts in accordance with the reservations of posts provided by or under any law or order for the time being in force and shall invite applications online from the intending candidates. Abstract of such advertisement shall also be published in the Official Gazette and at least in two leading newspapers having wide circulation in the State, of which one shall be in Kannada language.

(2) A candidate applying for any of the category of posts shall indicate in his/her application the name of one of the districts of his/her choice for appointment. Selection shall be restricted to that district only. The candidate shall also indicate order of preference of the post for which he/she shall be considered.

**6. Conduct of competitive examination :-** (1) A competitive examination shall be conducted by the Special Selection Committee through Examination Authority in the following manner, namely:-

(A) The examination shall be in the form of objective multiple choice, consisting of two papers carrying 100 marks each in respect of posts of Grama Panchayath Secretary cum Rural Development Assistant Grade-2 and Second Division Accounts Assistant, namely:-

**i) Paper-I. General Paper**:- Covering General Knowledge of topics relating to current events, General Science, Indian History, Indian Geography, Social Science, matters of every day observation, General Kannada, General English, General mental ability and Computer Knowledge as may be expected of a person who has passed the prescribed qualifying examination; and

**ii) Paper-II. Specific Paper on Rural Development and Panchayath Raj:-** Covering status of people in rural areas of Karnataka and India, Karnataka Gramaswaraj and Panchayath Raj Act 1993 and Rules, Central and State Programmes for Rural Development, drinking water and sanitation and Panchayath Raj.

(B) The papers shall be set both in Kannada and English language.

(C) The Examination Authority shall publish the marks secured in the competitive examination.

7. **Knowledge of Kannada Language:-** (1) No candidate shall qualify for inclusion of his/her name in the selection list to the post of Grama Panchayath Secretary cum Rural Development Assistant Grade-2 and Second Division Accounts Assistant, unless he/she qualifies in a test in Kannada language comprising of one paper carrying maximum of 150 marks and secure a minimum of 50 marks in the said qualifying test regarding knowledge of kannada. The standard of this paper shall be that of first language of Kannada at S.S.L.C level.

Provided that, the Appointing Authority may exempt a candidate from passing the kannada language test if the candidate has passed the SSLC examination or any equivalent examination or any examination higher than SSLC in which Kannada is the main language or second language or an optional subject (but not one of the subject in composite paper) or has passed in kannada medium or has passed the Kannada Language Test conducted by the Karnataka Public Service Commission.

(2) The Test of Kannada language shall be conducted by the Special Selection Committee through Examination Authority.

**8. Preparation of Select List of Candidates:-** (1) The Special Selection Committee shall, from among the candidates who have applied in pursuance of the advertisements under Rule 5, prepare a Provisional List of candidates eligible for appointment under these rules equal to the number of vacancies notified in the order of merit determined on the basis of percentage of total marks secured in the competitive examination in respect of each category of post and subject to the reservation of posts provided by or under any law or any rules for the time being in force.

(2) If two or more candidates have secured equal percentage of marks in the Competitive Examination, the order of merit of such candidates shall be fixed on the basis of their age, the older in the age being placed above in the order of merit. The Special Selection Committee shall prepare a Final Select List of candidates in respect of each category of post accordingly.

(3) The Special Selection Committee shall also prepare an Additional Select List of such of the candidates not included in the Select List prepared under sub-rule (1), equal to twenty five percent of the total number of vacancies in each of the reservation roster commencing from first point in the Select List under sub-rule (1).

(4) The Provisional Select List and Additional Select List may, as far as possible, be prepared within one hundred and fifty days from the last date fixed for receipt of applications by the Special Selection Committee. The said Provisional List, Final List and Additional List prepared under sub-rule (1) to (3) shall be published in the Official Gazette and Official Website of The Special Selection Committee.

(5) The Select List and the Additional select list shall be valid till all the vacancies specified under these rules are filled up or till the publication of the next Select List of these caders which ever is earlier.

**9. Appointment of candidates:-** (1) The Special Selection Committee shall send the list of candidates selected under Rule 8 to the Appointing Authority. The candidates whose names are included in the select list by the Special Selection Committee shall be appointed by the Appointing Authority in the vacancies in the order in which the names are found in the Main Select List after satisfying itself, after such enquiry as may be considered necessary, that each candidate is suitable in all respects for such appointment,

(2) If a candidate whose name is included in the Select List fails to report for duty within the prescribed period or extended period, then a candidate from the Additional Select List belonging to the same reservation category as of the candidate who failed to report for duty, shall be appointed by the Appointing Authority, after such enquiry as may be considered necessary that each candidate is suitable in all respects for such appointment. The candidates in the Additional Select List may be appointed in the posts, not exceeding the extent of unfilled vacancies in the Main Select List.

(3) The inclusion of the name of the candidates in the main select list and the additional select list published under rule 8 shall not confer any right of appointment.

**10. Application of other rules:-** The Karnataka Civil Services Rules, The Karnataka Civil Services (General Recruitment) Rules, 1977, the Karnataka Civil Services (Classification, Control and Appeal) Rules 1957, the Karnataka Civil Services (Conduct) Rules, 1966 and all other rules for the time being in force regulating the recruitment and conditions of service of Government Servants made or deemed to have been made under the Karnataka State Civil Services Act, 1978 (Karnataka Act 14 of 1990) in so far as such rules are not inconsistent with the provisions of these rules shall be applicable to the selection made and to the persons appointed under these rules.

**SCHEDULE**

(See sub-rule (3) of rule 1 and rule 2)

| SL. NO | Category of post and Scale of Pay | Number of posts to be filled | Method of Recruitment | Minimum Qualification |
|---|---|---|---|---|
| (1) | (2) | (3) | (4) | (5) |
| 1 | Grama Panchayath Secretary cum Rural Development Assistant Grade-2 (Rs. 21,400 – 42,000) | Residual = + Hyderabad Karnataka = Total | By Direct Recruitment | Must have Passed Pre-University Course or Equivalent Examination. |
| 2 | Second Division Accounts Assistant (Rs. 21,400 – 42,000) | Residual = + Hyderabad Karnataka = Total | By Direct Recruitment | Must have Passed Pre-University Course or Equivalent Examination. |

By order and in the name of the Governor of Karnataka,

**Mubarak Ahmed**
Deputy Director and Ex-Officio
Under Secretary to Government
Rural Development & Panchayath Raj Department.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100